**ಸಿ. ಸಿ. ನಂ. 5025/2023**

**ಪಿ ಡಬ್ಲ್ಯೂ: 1**

**ಸಾಕ್ಷಿಯು ದಿನಾಂಕ:** 18-06-2025 **ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟಿ ಸವಾಲು: ಆರೋಪಿ ಪರ ಶ್ರೀ ಕೆ ಎಸ್ ಎಂ., ವಕೀಲರಿಂದ**

ನನ್ನ ಹೆಸರಿನಲ್ಲಿ ಎಷ್ಟು ಕೃಷಿ ಭೂಮಿ ಇರುತ್ತದೆ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಅಂದರೆ ಸರಿ. ನನ್ನ ಹೆಸರಿನಲ್ಲಿ ಭೂಮಿ ಇಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಾಯಿಯ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ದೂರಿನಲ್ಲಿ ನನಗೆ ಎಷ್ಟು ಆದಾಯ ಇರುತ್ತದೆ ಮತ್ತು ಯಾವ ಮೂಲದಿಂದ ಆದಾಯ ಇರುತ್ತದೆ ಎಂದು ತೋರಿಸಿಲ್ಲ ಅಂದರೆ ಸರಿ. ನಾನು ಸಾಲ ಕೊಡುವ ಲೇವಾದೇವಿ ವ್ಯವಹಾರವನ್ನು ಮಾಡುವುದಿಲ್ಲ. ಲೇವಾದೇವಿ ವ್ಯವಹಾರವನ್ನು ಯಾವ ರೀತಿ ಮಾಡುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಆರೋಪಿ ಯಾವ ರೀತಿ ಪರಿಚಯ ಎಂದು ದೂರಿನಲ್ಲಿ ನಮೂದಿಸಿಲ್ಲ ಅಂದರೆ ಸರಿ.

ನನ್ನ ದೂರಿನಲ್ಲಿ ಆರೋಪಿ ಯಾವ ದಿನ ನನ್ನ ಬಳಿ ಸಾಲ ಕೇಳಿಕೊಂಡು ಬಂದಿದ್ದ ಮತ್ತು ವ್ಯವಹಾರದ ಕುರಿತು ಏನು ಮಾತುಕತೆ ಆಗಿತ್ತು ಎಂದು ನಮೂದು ಮಾಡಿಲ್ಲ ಅಂದರೆ ಸರಿ. ಸಾಲ ಕೊಟ್ಟಾಗ ಭದ್ರತೆಗಾಗಿ ಯಾವುದೇ ದಾಖಲೆ ಬರೆಸಿಕೊಂಡಿಲ್ಲ. ನಾನು ಆರೋಪಿಗೆ ಚೆಕ್ ಅಮಾನ್ಯವಾಗಿದೆ ಎಂದು ನೋಟಿಸ್ ನೀಡಿದಾಗ ಅವರು ಉತ್ತರ ನೋಟಿಸ್ ನೀಡಿದ್ದರು ಅಂದರೆ ಸರಿ. ಸದರಿ ಉತ್ತರ ನೋಟಿಸ್ ನಲ್ಲಿನ ವಿಷಯ ನನಗೆ ಗೊತ್ತಿರುವುದಿಲ್ಲ. ಸದರಿ ಉತ್ತರ ನೋಟಿಸ್ ನಲ್ಲಿನ ಅಂಶಗಳನ್ನು ವಕೀಲರಿಗೆ ಕೇಳಿ ತಿಳಿದುಕೊಂಡಿಲ್ಲ.

ಆರೋಪಿ ಚೆಕ್ ನ್ನು ಸಂತೋಷ ಎಂಬುವವರಿಗೆ ಕೊಟ್ಟಿದ್ದಾಗಿ, ಸದರಿಯವರು ಮೃತ ಪಟ್ಟ ನಂತರ ಆ ಚೆಕ್ ನ್ನು ನಾನು ದುರುಪಯೋಗಪಡಿಸಿಕೊಳ್ಳುತ್ತಿರುವುದಾಗಿ ಆರೋಪಿಸಿ ಉತ್ತರ ನೀಡಿದ್ದರು ಅಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.